2 ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಚಾರಗಳು –

ವಿಷಯ – ಚಾಮರಾಜನಗರದಲ್ಲಿ ಕುಡಿಯುವ ನೀರನ್ನೆತ್ತುವ ಯಂತ್ರವು ಕೆಟ್ಟು ಹೋಗಿ ಕುಡಿಯುವ ನೀರಿಗೆ ತೊಂದರೆ ಉಂಟಾಗಿರುವ ಬಗ್ಗೆ

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) – ಅಧ್ಯಕ್ಷರೆ, ಕುಡಿಯುವ ನೀರಿನ ಬಗ್ಗೆ ಮಾನ್ಯ ಉಪಮುಖ್ಯಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ ಚಾಮರಾಜನಗರಕ್ಕೆ ಟಿ ನರಸೀಪುರದಿಂದ ಕುಡಿಯುವ ನೀರನ್ನು ತೆಗೆದುಕೊಂಡು ಹೋಗತಕ್ಕಂಧಾದ್ದು ಕಪಿಲಾ ಮತ್ತು ಕಾವೇರಿ ನದಿಗಳ ನೀರನ್ನೆತ್ತುವ ಯಂತ್ರವು ಸಂಪೂರ್ಣ ಕೆಟ್ಟು ಹೋಗಿ ಇಡೀ ಚಾಮರಾಜನಗರದಲ್ಲಿ ಗಂಭೀರವಾದ ಪರಿಸ್ಥಿತಿ ನಿರ್ಮಾಣವಾಗಿದೆ ಆದುದರಿಂದ, ಮಾನ್ಯ ಉಪ ಮುಖ್ಯಮಂತ್ರಿಗಳಲ್ಲಿ ಕೇಳುತ್ತಿದ್ದೇನೆ ದಯವಿಟ್ಟು ಈ ಬಗ್ಗೆ ತಾವು ತಕ್ಷಣ ಯಂತ್ರವನ್ನು ರಿಪೇರಿ ಮಾಡಿಸುವುದಕ್ಕೆ ಕ್ರಮ ಕೈಗೊಳ್ಳಬೇಕು ಇದರ ಬಗ್ಗೆ ಅಷ್ಟು ಹೊತ್ತಿನಿಂದಲೂ ತಮಗೆ ಹೇಳಬೇಕೆಂದು ಕುಳಿತಿದ್ದೆ ಈ ಬಗ್ಗೆ ತಾವೇನಾದರೂ ಒಂದು ತೀರ್ಮಾನ ತೆಗೆದುಕೊಂಡು ಆ ನೀರೆತ್ತುವ ಯಂತ್ರವನ್ನು ತಕ್ಷಣ ದುರಸ್ತಿ ಮಾಡಿ ಕುಡಿಯುವ ನೀರಿಗೆ ವ್ಯವಸ್ಥೆ ಮಾಡಿಕೊಡಬೇಕೆಂದು, ಈ ಬಗ್ಗೆ ಸದನದಲ್ಲಿ ತಾವು ಏನಾದರೊಂದು ಹೇಳಬೇಕು

ಹೆಚ್ ಎಸ್ ಮಹದೇವಪ್ರಸಾದ್ (ಕನ್ನಡ ಮತ್ತು ಸಂಸ್ಕೃತಿ ಸಚಿವರು) – ಚಾಮರಾಜ ನಗರದಲ್ಲಿ ಮಾನ್ಯ ಸದಸ್ಯರು ಹೇಳುವ ರೀತಿಯಲ್ಲಿ ನೀರಿನ ತೊಂದರೆ ಉಂಟಾಗಿದೆ ಟಿ ನರಸೀಪುರದಿಂದ ನೀರನ್ನು ಪಂಪ್ ಮಾಡಿ ತರುವಂತಹ 700 ಹೆಚ್ ಪಿ ಮೋಟಾರ್ ಸುಟ್ಟುಹೋಗಿದ್ದರಿಂದ alternative motor ಇಲ್ಲದೆಯೇ ನೀರಿನ supply ಯಲ್ಲಿ ತೊಂದರೆಯಾಗಿದೆ Alternative ಆಗಿ ಬೇರೆ motor ನ್ನು ತಂದು ಅಳವಡಿಸಲು ಜಿಲ್ಲಾಧಿಕಾರಿಯವರು ಪ್ರಯತ್ನ ಮಾಡುತ್ತಿದ್ದಾರೆ ಅಲ್ಲಿಗೆ ಹೊಸ ಪಂಪ್‌ನ್ನು ಖರೀದಿ ಮಾಡಬೇಕೆಂಬ ಪ್ರಸ್ತಾವನೆ ಇದೆ ಅದನ್ನು ಮಾನ್ಯ ಹಣಕಾಸು ಸಚಿವರಿಗೆ ಹೇಳಿ ಆದಷ್ಟು ಬೇಗ ಒಂದು ಮೋಟಾರನ್ನು ಖರೀದಿ ಮಾಡಲು ವ್ಯವಸ್ಥೆ ಮಾಡುತ್ತೇವೆ

ಶ್ರೀ ವಾಟಾಳ್ ನಾಗರಾಜ್ – ಪರಿಸ್ಥಿತಿ ಬಹಳ ಹದಗೆಟ್ಟು ಹೋಗಿದೆ ನಾನು ಬೆಳಿಗ್ಗೆಯಿಂದ ಬಾಯಿ ಮುಚ್ಚಿಕೊಂಡು ಕುಳಿತಿದ್ದೇನೆ ಅವರಿಗೆ ಕಾಡಿ ಬೇಡಿ ಹೇಳಿದೆ, ಮುಖ್ಯಮಂತ್ರಿಯವರಿಗೆ ಹೇಳಿದೆ, ಏನೂ ಆಗುತ್ತಿಲ್ಲ ಮಾನ್ಯ ಯಡಿಯೂರಪ್ಪನವರೆ, ತಾವು ಸ್ವಲ್ಪ ಹೇಳಿ ಪರಿಸ್ಥಿತಿ ಬಹಳ ಹದಗೆಟ್ಟು ಹೋಗಿದೆ 8–10 ಲಕ್ಷವಾಗುತ್ತದೆ

ಶ್ರೀ ಹೆಚ್ ಎಸ್ ಮಹದೇವಪ್ರಸಾದ್ – ಒಂದು ಹೊಸ ಯಂತ್ರವನ್ನು ಖರೀದಿ ಮಾಡಲು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸುತ್ತಿದ್ದಾರೆ ಅದನ್ನು ಸಧ್ಯದಲ್ಲೇ ಮಂಜೂರು ಮಾಡಿಸಿ ಹೊಸ ಯಂತ್ರವನ್ನು ಅಳವಡಿಸಲು ವ್ಯವಸ್ಥೆ ಮಾಡುತ್ತೇವೆ ತಾತ್ಕಾಲಿಕವಾಗಿ ಎಷ್ಟು ಟ್ಯಾಂಕರ್‌ಗಳಿದೆ, ಅದೆಲ್ಲವನ್ನು ಚಾಮರಾಜನಗರಕ್ಕೆ ತಂದು ನೀರನ್ನು ಕೊಡಿಸುವ ವ್ಯವಸ್ಥೆ ಮಾಡುತ್ತಿದ್ದೇವೆ

(ಈ ಹಂತದಲ್ಲಿ ಮಾನ್ಯ ವಾಟಾಳ್ ನಾಗರಾಜ್‌ರವರು ಧರಣಿ ಮಾಡಲು ಬಾವಿಗೆ ಬಂದರು)

ಉಪಾಧ್ಯಕ್ಷರು .– ನೀವು ನಿಮ್ಮ ಸ್ಥಾನಕ್ಕೆ ಹೋಗಿ, ಅವರು ಹೇಳುತ್ತಾರೆ

ಶ್ರೀ ಬಿ ಎಸ್ ಯಡಿಯೂರಪ್ಪ – ನೀವು ನಿಮ್ಮ ಸ್ಥಾನಕ್ಕೆ ಬನ್ನಿ ಅದನ್ನು ಮಾಡಿಸಿಕೊಡುತ್ತೇನೆ

ಶ್ರೀ ಅಮರೇಗೌಡ ಬಯ್ಯಾಪುರ್ – ಎಲ್ಲಾ ಜಿಲ್ಲೆಗಳಲ್ಲಿ ಈ ರೀತಿಯ ಪರಿಸ್ಥಿತಿ ಇದೆ ಆದ್ದರಿಂದ ಎಲ್ಲರೂ ಈ ರೀತಿ ಧರಣಿ ಮಾಡಬಹುದೇ?

(ಮಾನ್ಯ ವಾಟಾಳ್ ನಾಗರಾಜ್‌ರವರು ಬಾವಿಯಿಂದ ಮಾತನಾಡುತ್ತಿದ್ದರು)

ಶ್ರೀ ಬಿ ಎಸ್ ಯಡಿಯೂರಪ್ಪ – ಅದನ್ನು ಮಾಡಿಸಿಕೊಡುತ್ತೇನೆ ಬನ್ನಿ ಈ ರೀತಿ ಬೇಜಾರು ಮಾಡಿಕೊಂಡರೆ ಹೇಗೆ?

ಶ್ರೀ ಜೆ ಎಸ್ ಗಡ್ಡದೇವರ ಮರ – ಮಾನ್ಯ ಬಯ್ಯಾಪುರ್‌ರವರು ಹೇಳಿದಂತೆ ಎಲ್ಲಾ ತಾಲ್ಲೂಕುಗಳಲ್ಲೂ ಈ ಸಮಸ್ಯೆ ಇದೆ

(ಈ ಹಂತದಲ್ಲಿ ಮಾನ್ಯ ವಾಟಾಳ್ ನಾಗರಾಜ್‌ರವರು ಸಭೆಯಿಂದ ಹೊರನಡೆದರು)

ಶ್ರೀ ಬಿ ಎಸ್ ಯಡಿಯೂರಪ್ಪ – ಅವರಿಗೆ ಮಾಡಿಸಿಕೊಡುತ್ತೇನೆ ಬನ್ನಿ ಎಂದೆ ಅವರು ಬೇಜಾರು ಮಾಡಿಕೊಂಡು ಹೋಗಿಬಿಟ್ಟರು

ಉಪಾಧ್ಯಕ್ಷರು – ಅವರು ಮತ್ತೆ ಬರುತ್ತಾರೆ ಅವರು ಬಂದಮೇಲೆ ಮತ್ತೆ ಮಾತನಾಡುವಿರಂತೆ ಈಗ ತೊಂದರೆಯೇನು ಇಲ್ಲ ಮಾನ್ಯ ಹೆಗ್ಡೆಯವರೆ ಮಾತನಾಡಿ

ಶ್ರೀ ಬಿ ಎಸ್ ಯಡಿಯೂರಪ್ಪ – ಅವರೇನು ಹಣವನ್ನು ಕೇಳಿದ್ದಾರೆ, ಅದು ಬಂದ ತಕ್ಷಣ ಕೊಟ್ಟು ಅಲ್ಲಿ ಮೋಟಾರ್ ಫಿಕ್ಸ್ ಮಾಡಲು ವ್ಯವಸ್ಥೆ ಮಾಡುತ್ತೇವೆ ಅವರಿಗೆ ವೆಲ್‌ನಿಂದ ಬನ್ನಿ ಎಂದೆ ಅದಕ್ಕೇ ಅವರು ಬೇಜಾರು ಮಾಡಿಕೊಂಡು ಹೋದರು

ಶ್ರೀ ಜೆ ಎಸ್ ಗಡ್ಡದೇವರ ಮರ – ಅವರು ಹೇಳುತ್ತಾರೆಂದಷ್ಟೇ ಅಲ್ಲ, ಎಲ್ಲಾ ತಾಲ್ಲೂಕುಗಳಲ್ಲೂ ಈ ಸಮಸ್ಯೆ ಇದೆ ನಮ್ಮ ಕ್ಷೇತ್ರದಲ್ಲಿ 300 ಹೆಚ್ ಪಿ ಮೋಟಾರೊಂದು ಸುಟ್ಟು ಸುಮಾರು ದಿವಸಗಳಿಂದ ದುರಸ್ಥಿಯಾಗಿಲ್ಲ

ಉಪಾಧ್ಯಕ್ಷರು – ಬಜೆಟ್ ಮೇಲೆ ಮುಗಿಯಲಿ ಅನಂತರ ಮಾತನಾಡಿ

3) 2007–2008ನೇ ಸಾಲಿನ ಆಯವ್ಯಯ ಮೇಲಿನ ಮುಂದುವರೆದ ಚರ್ಚೆ .–

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ – ಮಾನ್ಯ ಹಣಕಾಸು ಸಚಿವರು ಆಯವ್ಯಯವನ್ನು ಮಂಡನೆ ಮಾಡುವಾಗ 3ನೇ ಪೇಜಿನಲ್ಲಿ "ಹಿಂದಣ ಹೆಜ್ಜೆಯ ನೋಡಿ ಕಂಡಲ್ಲದೆನಿಂದ ಹೆಜ್ಜೆಯನರಿಯಬಾರದು" ಎಂದು ಹೇಳಿದ್ದಾರೆ ಇವರು ಹಿಂದಿನ ಹೆಜ್ಜೆಯನ್ನು ನೋಡದೆಯೇ ಮುಂದಿನ ಹೆಜ್ಜೆಯನ್ನಿಟ್ಟಿದ್ದಾರೆಯೇ ಎಂಬ ಅನುಮಾನ ಶುರುವಾಗುತ್ತದೆ ಹಿಂದಿನ ಅವಧಿಯಲ್ಲಿ ಏನೇನು ಅಭಿವೃದ್ಧಿಯಾಗಿದೆ, ಅದನ್ನು ನೋಡದೆಯೇ ಕೇವಲ ಈ ಸರ್ಕಾರದ ಅಭಿವೃದ್ಧಿಯೆಂದು ಮಾತ್ರ ಹೇಳಿಕೊಳ್ಳಬಾರದು 4 ವರ್ಷದಲ್ಲಿ financial discipline ಬಂದಂಥದ್ದು ಅದರ ಬಗ್ಗೆ ಸ್ವಲ್ಪ ಹೇಳಿದ್ದರೆ ಒತ್ತು ಬರುತ್ತಿತ್ತು ಇನ್ನೊಂದು ಆಲೋಚನೆ